## ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್\ಉಪಲೋಕ್\ಬಿಡಿ\153\2014\ಸನಿಕಾಸ-2

ಬಹುಮಹಡಿಗಳ ಕಟ್ಟಡ,
ಡಾ॥ಬಿ.ಆರ್.ಅಂಭೇಡ್ಕರ್ ವೀಧಿ,
ಬೆಂಗಳೂರು, ದಿನಾಂಕ: 28.10.2016

### ಕರ್ನಾಟಕ ಲೋಕಾಯುಕ್ತ ಕಾಯಿದೆ 1984ರ ಕಲಂ 12(1)ರ ಅನ್ವಯ ವರದಿ

**ವಿಷಯ:** ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಸ. ನಂ: 193 ಕ್ಷೇತ್ರ 1ಎ., ದೂರುದಾರರ ಜಮೀನನ್ನು ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರಿಡಾಂಗಣಕ್ಕೆ ಸ್ವಾಧೀನ ಪಡಿಸಿಕೊಂಡಿದ್ದು ಅದರ ಬದಲಿಗೆ ದೂರುದಾರರಿಗೆ ಇದೇ ಗ್ರಾಮದಲ್ಲಿ 1ಎ., ಬೇರೆ ಜಮೀನನ್ನು ಕೊಡಬೇಕು ಅದು ಲಭ್ಯವಿಲ್ಲದಿದ್ದರೆ 1ಎ., ಜಮೀನಿಗೆ ಪರಿಹಾರ ಧನ ನೀಡಲು ಸಕ್ಷಮ ಪ್ರಾಧಿಕಾರಕ್ಕೆ ಶಿಪಾರಸ್ಸು ಮಾಡುವ ಕುರಿತು.

*******

ಶ್ರೀಮತಿ ಮಂಜುಳಾ ವಿ. ತಾಯಿ ರತ್ನಮ್ಮ ಮರಲುಬಾಗಿಲು, ಹರಿಜನ ಕಾಲೋನಿ, 12ನೇ ವಾರ್ಡ, ದೇವನಹಳ್ಳಿ ಪಟ್ಟಣ, ದೇವನಹಳ್ಳಿ ತಾಲೂಕ್, ಬೆಂಗಳೂರು ಗ್ರಾಮಾಂತರ ಜಿಲ್ಲೆ, (ಇನ್ನು ಮುಂದೆ "ದೂರುದಾರರು" ಎಂದು ಕರೆಯಲ್ಪಡುತ್ತಾರೆ) ತಮ್ಮ ದೂರಿನಲ್ಲಿ ಶ್ರೀ.ವೆಂಕಟರಾಜು, ತಹಶೀಲ್ದಾರ್, ದೇವನಹಳ್ಳಿ ತಾಲೂಕು, ಬೆಂಗಳೂರು ಗ್ರಾಮಾಂತರ ಜಿಲ್ಲೆ (ಇನ್ನು ಮುಂದೆ ಎದುರುದಾರ ಎಂದು ಕರೆಯಲ್ಪಡುತ್ತಾರೆ) ರವರ ವಿರುದ್ಧ ಅವ್ಯವಹಾರದ ಬಗ್ಗೆ ನೀಡಿದ ದೂರನ್ನು, ಕರ್ನಾಟಕ ಲೋಕಾಯುಕ್ತ ಕಾಯಿದೆಯ ಕಲಂ 9ರ ಅಡಿಯಲ್ಲಿ ತನಿಖೆಗೆ ತೆಗೆದುಕೊಂಡಿದ್ದಿದೆ.

2. **ದೂರಿನ ಸಂಕ್ಷಿಪ್ತ ವಿವರಣೆ:-**

ದೂರುದಾರರು ತಮ್ಮ ದೂರಿನಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲೆಯ ದೇವನಹಳ್ಳಿ ಗ್ರಾಮದ ಸ. ನಂ: 193 ಕ್ಷೇತ್ರ 1ಎ., ಜಮೀನು ಸರ್ಕಾರದಿಂದ ದೂರುದಾರರಾದ ಶ್ರೀಮತಿ ರತ್ನಮ್ಮ ಗಂಡ ವೆಂಕಟೇಶ ಇವರಿಗೆ ಮಂಜೂರಾಗಿದ್ದು ಇರುತ್ತದೆ. ಆದರೆ ಈ ಜಮೀನು

ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕ್ರಿಡಾಂಗಣಕ್ಕೆ ಸ್ವಾಧೀನಪಡಿಸಿಕೊಂಡು ದೂರುದಾರರಿಗೆ ಬದಲಿ ಜಮೀನು ನೀಡುವುದಾಗಿ ಸರ್ಕಾರದವರು ಹೇಳಿ ನಂತರ ಯಾವುದೇ ಜಮೀನು ಲಭ್ಯವಿರುವುದಿಲ್ಲ ಅಂತ ಎದುರುದಾರರು ತಮಗೆ ಬದಲಿ ನಿವೇಶನ ನೀಡಿರುವುದಿಲ್ಲವೆಂದು ದೂರು ನೀಡಿದ್ದಾರೆ.

3. ಎದುರುದಾರರು ತಮ್ಮ ಆಕ್ಷೇಪಣೆಯಲ್ಲಿ ದೂರುದಾರರಿಗೆ ಬಗರ್ ಹುಕುಂ ಸಮೀತಿಯಲ್ಲಿ ಜಮೀನು ಮಂಜೂರಾಗಿರುವುದಿಲ್ಲ. ಆದರೆ, ಇವರು ನಮೂನೆ-53 ರಲ್ಲಿ ಅರ್ಜಿ ಸಲ್ಲಿಸಿ ಅನುಭವದಲ್ಲಿ ಇರುವುದಾಗಿ ತಿಳಿಸಿರುತ್ತಾರೆ. ಆದರೆ, ಈ ಜಮೀನನ್ನು ಮಾನ್ಯ ಜಿಲ್ಲಾಧಿಕಾರಿಗಳು ಕ್ರಿಡಾಂಗಣಕ್ಕೆ ಮಂಜೂರು ಮಾಡಿರುತ್ತಾರೆ. ಸರ್ಕಾರದ ಸೂತ್ತೋಲೆ ದಿ:9-6-2014 ಮತ್ತು ದಿ:18-9-2014 ರಂತೆ ಅರ್ಹತೆ ಇರುವುದಿಲ್ಲವಾದ್ದರಿಂದ ದೂರುದಾರರಿಗೆ ಬಂದ ಜಮೀನನ್ನು ನೀಡುವ ಪ್ರಶ್ನೆ ಉದ್ಭವಿಸುವುದಿಲ್ಲ. ಸರ್ಕಾರದ ಸೂತ್ತೋಲೆಯ ಪ್ರಕಾರ ದೇವನಹಳ್ಳಿ ಪಟ್ಟಣದಿಂದ ಜಮೀನು ಒಂದುವರೆ ಕೀಲೋಮೀಟರ್ ಅಂತರದಲ್ಲಿದ್ದು, ಇದನ್ನು ಮಂಜೂರು ಮಾಡಲು ಅವಕಾಶವಿರುದಿಲ್ಲ. ಆದ್ದರಿಂದ ಪ್ರಕರಣವನ್ನು ಮುಕ್ತಾಯಗೊಳಿಸಬೇಕೆಂದು ಕೇಳಿಕೊಂಡಿದ್ದಾರೆ.

4. ದೂರುದಾರರು ತಮ್ಮ ಪ್ರತ್ಯುತ್ತರ ಸಲ್ಲಿಸಿರುವುದಿಲ್ಲ.

5. ದೂರುದಾರರು ಹಾಜರುಪಡಿಸಿದ ದೂರು ಮತ್ತು ದಾಖಲಾತಿಗಳು, ಆಕ್ಷೇಪಣೆ ಮತ್ತು ದಾಖಲಾತಿಗಳನ್ನು ಪರಿಶೀಲಿಸಿದಾಗ, ಸರ್ಕಾರದ ಉಪ-ಕಾರ್ಯದರ್ಶಿಗಳು-3 ಬೆಂಗಳೂರು ಅಭಿವೃದ್ಧಿ ಪ್ರಾದಿಕಾರ, ಬೆಂಗಳೂರು ರವರು ಈ ಕಚೇರಿಗೆ ವರದಿಯನ್ನು ಸಲ್ಲಿಸಿದ್ದು, ಅದರಲ್ಲಿ ವಿಜಯಪುರ ಹೋಬಳಿ, ರಾಜಸ್ವ ನಿರೀಕ್ಷಕರು, ಬದಲಿ ಜಾಗೆ ನೀಡುವ ಬಗ್ಗೆ ಜಮೀನಿನ

76

ಲಭ್ಯತೆಯ ಬಗ್ಗೆ ತಕ್ಷಣ ಪರಿಶೀಲಿಸಿ, ವರದಿ ನೀಡಲು ಆದೇಶಿಸಲಾಗಿದೆ. ದಿ:3-3-2014 ರ ವರೆಗೆ ರಾಜಸ್ವ ನಿರೀಕ್ಷಕರಿಂದ ಮಾಹಿತಿ ಬಂದಿರುವುದಿಲ್ಲ.

6. ದಿನಾಂಕ: 15-2-2014 ರಂದು ಆಗಿನ ದೇವನಹಳ್ಳಿ ತಹಶೀಲ್ದಾರರು ದೂರುದಾರರ ಸರ್ವೆ ನಂ.193 ರಲ್ಲಿ ಒಂದು ಎಕರೆ ಜಮೀನನ್ನು ಕ್ರಿಡಾಂಗಣಕ್ಕೆ ಪಡೆದುಕೊಳ್ಳಲಾಗಿತ್ತು. ಆದರೆ ಅದರ ಬಗ್ಗೆ ಬದಲಿ ಜಮೀನನ್ನು ಅವರಿಗೆ ನೀಡಬೇಕಾಗಿತ್ತು ಎಂದು ತಿಳಿಸಿದ್ದಾರೆ. ಆ ವೇಳೆಯಲ್ಲಿ ಬದಲಿ ಜಮೀನಿನ ಲಭ್ಯತೆಯ ಬಗ್ಗೆ ಗ್ರಾಮಲೆಕ್ಕಾಧಿಕಾರಿಗಳು, ರಾಜಸ್ವ ನಿರೀಕ್ಷಕರು, ಮೋಜನಿದಾರರು, ಈ ಬಗ್ಗೆ ಸ್ಥಳ ಪರಿಶೀಲಿಸಿ, ಯಾವುದೇ ಬದಲಿ ಜಮೀನು ಇರುವುದಿಲ್ಲವೆಂದು ಎದರುದಾರರಿಗೆ ವರದಿಯನ್ನು ನೀಡಿರುತ್ತಾರೆ. ಆದ್ದರಿಂದ ದೂರುದಾರರಿಗೆ ಸರ್ವೆ ನಂ.193 ರಲ್ಲಿ ಒಂದು ಎಕರೆ ಜಮೀನು ಮಂಜೂರು ಆಗಿದ್ದು, ಅದನ್ನು ಕ್ರಿಡಾಂಗಣಕ್ಕೆ ಪಡೆದುಕೊಳ್ಳಲಾಗಿದೆ ಎನ್ನುವುದನ್ನು ಆಗೀನ ತಹಶೀಲ್ದಾರರು ಹಾಗೂ ಲಭ್ಯವಿದ್ದ ದಾಖಲೆಯಿಂದ ಕಂಡುಬರುತ್ತದೆ. ಆದರೆ, ಇಲ್ಲಿಯವರೆಗೆ ದೂರುದಾರರಿಗೆ ಬದಲಿ ನಿವೇಶನ ಅಥವಾ ಅದಕ್ಕೆ ಸಮನಾಗಿ ಪರಿಹಾರ ಧನ ನೀಡಿರುವುದಿಲ್ಲ. ಈ ಎಲ್ಲ ಅಂಶಗಳನ್ನು ಪರಿಶೀಲಿಸಿದಾಗ ಎದರುದಾರರು ದೂರುದಾರರಿಗೆ ಬದಲಿ ನಿವೇಶನ ಅಥವಾ ದೂರುದಾರರ ಜಮೀನಿಗೆ ಪರಿಹಾರ ಧನ ಒದಗಿಸಿಕೊಡುವಲ್ಲಿ ವಿಫಲರಾಗಿದ್ದಾರೆಂದು ಮೇಲ್ನೋಟಕ್ಕೆ ಕಂಡುಬರುತ್ತದೆ.

7. ಆದ್ದರಿಂದ ದೂರುದಾರರಿಗೆ ದೇವನಹಳ್ಳಿ ಗ್ರಾಮದಲ್ಲಿ 1ಎ., ಬದಲಿ ಜಮೀನನ್ನು ನೀಡಬೇಕು ಅಥವಾ ಯಾವುದೇ ಜಮೀನು ಲಭ್ಯವಿಲ್ಲದೆ ಹೋದರೆ ಅವರ ಜಮೀನಿಗೆ ಪರಿಹಾರ ಧನವನ್ನು ನೀಡಲು ಕ್ರಮ ಕೈಗೊಳ್ಳಲು ಸಕ್ಷಮ ಪ್ರಾಧಿಕಾರಕ್ಕೆ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(1) ರಡಿಯಲ್ಲಿ ನಿರ್ದೇಶಿಸಲಾಗಿದೆ. ಆದ್ದರಿಂದ ಮಾನ್ಯ ಜಿಲ್ಲಾಧಿಕಾರಿಗಳು ಬೆಂಗಳೂರು ಗ್ರಾಮಾಂತರ ಜಿಲ್ಲೆ ಇವರಿಗೆ ಈ ಬಗ್ಗೆ ಕ್ರಮ

75

ಕೈಗೊಳ್ಳುವಂತೆ ಆದೇಶಿಸುವ ಅಧಿಕಾರವನ್ನು ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12 (1)ರಲ್ಲಿ ಗೌರವಾನ್ವಿತ ಉಪಲೋಕಾಯುಕ್ತರು ಹೊಂದಿದ್ದಾರೆ.

8. ಆದ್ದರಿಂದ ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(2)ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ **ಒಂದು ತಿಂಗಳೊಳಗೆ** ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

Sd/- 28/10/16.

(ನ್ಯಾಯಾಮೂರ್ತಿ ಸುಬಾಷ್ ಬಿ ಆಡಿ)
ಉಪಲೋಕಾಯುಕ್ತರು,
ಕರ್ನಾಟಕ ರಾಜ್ಯ.